ಅಸಲು ದಾವಾ ನಂಃ **24/2022**
ಡಿ.ಡಬ್ಲ್ಯೂಃ**1** ,ಶಾಂತಪ್ಪ

ದಿನಾಂಕ :**18-03-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಜಿ.ಎಸ್. ಎಚ್. ವಕೀಲರಿಂದ

ನಾನು 10 ನೇ ತರಗತಿ ನಪಾಸ ಆಗಿರುತ್ತೇನೆ. ನಾನು ಸುಮಾರು 9 ವರ್ಷದ ಮಗು ಇದ್ದಾಗ ನನ್ನ ತಾತಾ ಸಾಬಣ್ಣ ತೀರಿಕೊಂಡಿರುತ್ತಾರೆ. ರಾಮಣ್ಣ ನನ್ನ ತಂದೆ. ರತ್ನಮ್ಮ/1 ನೇ ಪ್ರತಿವಾದಿ ನನ್ನ ತಾಯಿ. ನನ್ನ ತಂದೆ ತೀರಿಕೊಂಡು ಸುಮಾರು 20 ವರ್ಷ ಮೇಲೆ ಆಯಿತು. 2 ನೇ ಪ್ರತಿವಾದಿ ಪಾರ್ವತಮ್ಮ ನನ್ನ ಅಕ್ಕ ಆಗಬೇಕು. ವಾದಿ ಶೇಖಮ್ಮ ಮತ್ತು 4 ನೇ ಪ್ರತಿವಾದಿ ಸುಶಿಲಮ್ಮ ನನಗೆ ತಂಗಿಯರು ಆಗಬೇಕು. ದಾವಾ ಸ್ವತ್ತು ಸರ್ವೆ ನಂ: 58/2, 59/2, 32/2 ಒಟ್ಟು 10 ಎಕರೆ 36 ಗುಂಟೆ ಜಮೀನುಗಳು ನನ್ನ ತಂದೆ ಭಾಗಕ್ಕೆ ಇದ್ದವು ಎಂದು ಸೂಚಿಸುವುದು ಸರಿ. ಸರ್ವೆ ನಂ: 58/2, 59/2, ನನ್ನ ತಂದೆ ಹೆಸರಿಗೆ ಯಾವಾಗ ಖಾತೆ ಬದಲಾವಣೆ ಆಯಿತು ಎಂದು ಕೇಳಲಾಗಿ ಸಾಕ್ಷಿ ನನಗೆ ದಿನಾಂಕ ನೆನಪಿಲ್ಲಾ ಎಂದು ಹೇಳುತ್ತಾರೆ. ಸದರಿ ಎಲ್ಲಾ ಆಸ್ತಿ ನನ್ನ ತಂದೆ ಹೆಸರಿಗೆ ಇದ್ದರೆ ಸರಕಾರಿ ಸೌಲಭ್ಯ ಸಿಗುವುದಿಲ್ಲಾ ಎಂದು ಸ.ನಂ: 32/2 ಇದನ್ನು ನನ್ನ ತಾತಾ ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಸರಿ ಎಂದು ಹೇಳುತ್ತಾರೆ. ನನ್ನ ತಂದೆ ಜೀವಂತ ಇರುವರೆಗೂ ನಾವು ಎಲ್ಲರೂ ಕೂಡಿ ಇದ್ದೇವು ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ನನ್ನ ತಂದೆ ತೀರಕೊಂಡ ನಂತರ ಸರ್ವೆ ನಂ: 58/2, 59/2, ಎರಡೂ ಜಮೀನನ್ನು ನಾವು ಎಲ್ಲರೂ ಸೇರಿ ತಾಯಿಯ ಹೆಸರಿಗೆ ಮಾಡಿದ್ದೇವೆ ಎಂದರೆ ಸಾಕ್ಷಿ ಹೌದು ನಾನೇ ಮಾಡಿಸಿದ್ದೇ ಎಂದು ಹೇಳುತ್ತಾರೆ.

2 ನೇ ಪ್ರತಿವಾದಿಯನ್ನು ಅಲ್ಲೂರ ಗ್ರಾಮಕ್ಕೆ ಕೊಟ್ಟಿರುತ್ತೇವೆ. ಅವರ ಗಂಡ ತೀರಿಕೊಂಡ ನಂತರ ಅವರು ನಮ್ಮ ಜೊತೆ ಇಟಗಾ ಗ್ರಾಮದಲ್ಲಿ ಇರುತ್ತಾರೆ. ಸದರಿ 2 ನೇ ಪ್ರತಿವಾದಿಯ ಮಗನ ಮಗಳನ್ನು ನನ್ನ ಮಗನಿಗೆ ತೆಗೆದುಕೊಂಡಿರುತ್ತೆವೆ ಎಂದು ಸೂಚಿಸುವುದ ಸರಿ. ವಾದಿ ಮತ್ತು 4 ನೇ ಪ್ರತಿವಾದಿ ಮದುವೆ ಆಗಿ ಗಂಡನ ಮನೆಯಲ್ಲಿ ಇರುತ್ತಾರೆ. ಸರ್ವೆ ನಂ: 58/2, 59/2, ಎರಡೂ ಜಮೀನುಗಳನ್ನು ಓರಿಯಂಟ್ ಸಿಮೆಂಟ ಕಂಪನಿಯವರು ಖರಿದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿ. ಸದರಿ ಜಮೀನುಗಳನ್ನು ಮಾರಿ ಬಂದ ಹಣವನ್ನು ಎಲ್ಲಾ ನಾನೇ ಪಡೆದಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಹಣ ನನ್ನ ತಾಯಿ ಖಾತೆಯಲ್ಲಿ ಇದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆ ಹಣದಿಂದ ನಾನು ಸೇಡಂ ನಲ್ಲಿ ಮನೆ ಕಟ್ಟಿದ್ದೇನೆ ಎಂದರೆ ಸಾಕ್ಷಿ ಮನೆ ಕಟ್ಟಿದ್ದೇನೆ ಆದೆರ ನನ್ನ ತಾಯಿ ಹಣವನ್ನು ಎಲ್ಲರಿಗೂ ಹಂಚಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಹಣವನ್ನು ಯಾರಿಗೆ ಎಷ್ಟು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಿಖರವಾದ ಮೊತ್ತವನ್ನು ಹೇಳಲು ಆಗುವುದಿಲ್ಲಾ ಎಂದು ಹೇಳುತ್ತಾರೆ.

**ಅಸಲು ದಾವಾ ನಂಃ 24/2022**
**ಡಿ.ಡಬ್ಲ್ಯೂಃ1 ,ಶಾಂತಪ್ಪ**

ಓರಿಯಂಟ ಕಂಪನಿಗೆ ಮಾರಾಟ ಮಾಡಿದಾಗ ಕ್ರಯ ಪತ್ರಕ್ಕೆ ವಾದಿ ಮತ್ತು 4 ನೇ ಪ್ರತಿವಾದಿ ಸಹಿ ಮಾಡಿಲ್ಲಾ ಎಂದು ಸೂಚಿಸುವುದು ಸರಿ. ನಾನು ನನ್ನ ತಾಯಿ ಇಬ್ಬರೂ ವಾದಿ ಮತ್ತು 4 ನೇ ಪ್ರತಿವಾದಿಗೆ ತಿಳಿಸದೇ ಮಾರಾಟ ಮಾಡಿದ್ದೇವೆ ಎಂದರೆ ಸಾಕ್ಷಿ ಆಗ ಅವರು ಮದುವೆ ಆಗಿ ಗಂಡನ ಮನೆಗೆ ಹೋಗಿದ್ದರಿಂದ ಕೇಳಿಲ್ಲಾ ಎಂದು ಹೇಳುತ್ತಾರೆ. ಸ.ನಂ. 32/2 ಇದು ನನ್ನ ತಾತಾ ನನಗೆ ಮಾಡಿಕೊಟ್ಟಿರುವುದರಿಂದ ನಾನೇ ಮಾಲಿಕ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ಎಲ್ಲರಿಗೂ ಪಾಲು ಇದೆ ಎಂದು ಸೂಚಿಸುವುದು ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ..

ಮರು ವಿಚಾರಣೆ : ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**